

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹೊಸ ಸರಕಾರ ಬಂಗಾರ ಬಿತ್ತಿ ಬೆಳೆಯಬಲ್ಲುದೇ?

ಸಾವಿರಾರು ವರ್ಷಗಳ ಇತಿಹಾಸವುಳ್ಳ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಭಾರತೀಯ ಜನಜೀವನದ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿದೆ. ಈಗ ಅದು ಪಂಡಿತರ, ಪುರೋಹಿತರ ಭಾಷೆ ಎನಿಸಿ ಟೀಕೆಗೆ ಗುರಿಯಾಗಿದ್ದರೂ ಜನಸಾಮಾನ್ಯರ ಆಡುಮಾತಿನಲ್ಲಿ ಅದರ ಛಾಪು ನಿಸ್ಸಂಶಯವಾಗಿ ಗೋಚರಿಸುತ್ತದೆ. ಸಂಸ್ಕೃತ ಭಾಷೆಯ ಅನೇಕ ಶಬ್ದಗಳು ಭಾರತೀಯ ಭಾಷೆಗಳಲ್ಲಿ ಯಥೇಚ್ಛವಾಗಿ ಬೆರೆತಿವೆ. ಈಗ ಇಂಗ್ಲೀಷ್ ಶಬ್ದಗಳು ಹೆಚ್ಚಾಗಿ ಬಳಕೆಯಲ್ಲಿರುವಂತೆ. ಭಾಷಾಶಾಸ್ತ್ರದ ದೃಷ್ಟಿಯಿಂದ ಗ್ರೀಕ್, ಲ್ಯಾಟಿನ್, ಜರ್ಮನ್ ಇತ್ಯಾದಿ ಐರೋಪ್ಯಭಾಷೆಗಳು ಸಂಸ್ಕೃತಕ್ಕೆ ಹತ್ತಿರವೇ ಹೊರತು ದ್ರಾವಿಡಭಾಷೆಗಳಾದ ಕನ್ನಡ, ತಮಿಳು, ತೆಲುಗು ಅಲ್ಲ. ಹಿಂದಿನ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡದ ಸಂಬಂಧ ತಾಯಿ-ಮಗಳಂತೆ ಇತ್ತು. ಈಗ ಅದು ಅತ್ತೆ-ಸೊಸೆಯ ಸಂಬಂಧದಂತಾಗಿದೆ. ಅದು ಸರಿ, ಆದರೆ ಈ ವಾರದ ಅಂಕಣಬರಹದ ಶಿರೋನಾಮೆಗೂ ಈಗ ಬರೆಯುತ್ತಿರುವ ವಿಷಯಕ್ಕೂ ಏನು ಸಂಬಂಧ ಎಂದು ನಿಮ್ಮ ಆಕ್ಷೇಪಣೆಯೇ? ಸ್ವಲ್ಪ ತಾಳ್ಮೆಯಿಂದ ಮುಂದೆ ಓದಿ ನಿಮಗೇ ತಿಳಿಯುತ್ತದೆ.

ಜರ್ಮನಿಯಲ್ಲಿ ಸಂಸ್ಕೃತ ಕಲಿಕೆಗೆ ಬಹಳ ಹಿಂದಿನಿಂದಲೂ ತುಂಬಾ ಉತ್ತೇಜನವನ್ನು ನೀಡುತ್ತಾ ಬರಲಾಗಿದೆ. ಸಂಸ್ಕೃತಕ್ಕೆ ಭಾರತವನ್ನು ಬಿಟ್ಟರೆ ಎರಡನೆಯ ತವರು ಜರ್ಮನಿ ಎಂದೇ ಹೇಳಬಹುದು. ನಮ್ಮ ದೇಶದ ಆಕಾಶವಾಣಿಯಲ್ಲಿ ಸಂಸ್ಕೃತವಾರ್ತೆಗಳನ್ನು ಬಿತ್ತರಿಸಿದಂತೆ ಜರ್ಮನಿಯ ಆಕಾಶವಾಣಿಯಾದ Deutsche Welle ದಿಂದ ಪ್ರತಿ 15 ದಿನಗಳಿಗೊಮ್ಮೆ ಸಂಸ್ಕೃತವಾರ್ತೆಗಳನ್ನು ಬಿತ್ತರಿಸಲಾಗುತ್ತದೆ. ಸಂಸ್ಕೃತ ಕಲಿಕೆ, ಉನ್ನತ ಅಧ್ಯಯನ ಮತ್ತು ಸಂಶೋಧನಗಳಿಗೆ ಅಲ್ಲಿನ ವಿಶ್ವವಿದ್ಯಾನಿಲಯಗಳು ಉತ್ತಮ ವಾತಾವರಣವನ್ನು ಕಲ್ಪಿಸಿಕೊಟ್ಟಿವೆ. ಅವುಗಳಲ್ಲಿ ಒಂದಾದ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯವು ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ಆಗಾಗ್ಗೆ ನಿಯಮಿತವಾಗಿ ನಡೆಸುತ್ತಾ ಬಂದಿದೆ. ಕಳೆದ ವಾರ ಅಲ್ಲಿಗೆ ಭೇಟಿ ನೀಡಿದಾಗ 'ಚೋರಸ್ಯ ಚಾತುರ್ಯಮ್' ಎಂಬ ಒಂದು ಆಧುನಿಕ ಸಂಸ್ಕೃತ ನಾಟಕದ ವೀಡಿಯೋ ನಮ್ಮ ಗಮನ ಸೆಳೆಯಿತು. ಸಂಭಾಷಣಾ ಶಿಬಿರಕ್ಕೆ ಅಮೇರಿಕಾ, ಇಂಗ್ಲೆಂಡ್ ಮತ್ತು ನಾವು ಓದಿದ ವಿಯೆನ್ನಾ ವಿಶ್ವವಿದ್ಯಾನಿಲಯದಿಂದ ಬಂದಿದ್ದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಶಿಬಿರದ ಕೊನೆಯಲ್ಲಿ ಅಭಿನಯಿಸಿದ ನಾಟಕ ತುಂಬಾ ರೋಚಕವಾಗಿತ್ತು. ನಾಟಕದ ರಚನೆ: ಸೂರ್ಯನಾರಾಯಣ ನಂದಾ. ನಿರ್ದೇಶನ: ಡಾ. ಸದಾನಂದ ದಾಸ್. ನಾಟಕದ ಕಥಾವಸ್ತು ಹೀಗಿದೆ:

ಒಂದು ರಾಜ್ಯದಲ್ಲಿ ಒಬ್ಬ ಜಾಣ ಕಳ್ಳನಿದ್ದ. ಅವನು ಮಧ್ಯರಾತ್ರಿ ಒಬ್ಬ ಶ್ರೀಮಂತನ ಮನೆಗೆ ಕಳ್ಳತನ ಮಾಡಲು ಹೋಗುತ್ತಾನೆ. ಮನೆಯ ಮುಂದೆ ಕಾವಲು ಕಾಯುವ ಭಟರು ಇದ್ದರೂ ನೇರವಾಗಿ ಬಾಗಿಲ ಹತ್ತಿರ ಹೋಗುತ್ತಾನೆ. 'ಯಾರು ನೀವು?' ಎಂದು ಕಾವಲು ಭಟರು ಕೇಳುತ್ತಾರೆ. 'ನಾನೊಬ್ಬ ಕಳ್ಳ' ಎಂದೇ ಆ ಕಳ್ಳನು ಉತ್ತರ ಕೊಡುತ್ತಾನೆ. ಕಾವಲು ಭಟರು ಕ್ಷಣಹೊತ್ತು ಯೋಚಿಸಿ ಯಾವ ಕಳ್ಳನೂ ಹೀಗೆ ತಾನು ಕಳ್ಳ ಎಂದು ಹೇಳಿಕೊಳ್ಳುವುದಿಲ್ಲ. ಯಾರೋ ತಮ್ಮ ಯಜಮಾನರ ಸ್ನೇಹಿತರು ಬಂದಿರಬೇಕೆಂದು ಭಾವಿಸಿ ಒಳಗೆ ಬಿಡುತ್ತಾರೆ. ಸ್ವಲ್ಪ ಹೊತ್ತಿನ ಮೇಲೆ ಆ ಕಳ್ಳನು ಒಂದು ಗಂಟನ್ನು ಹೊತ್ತುಕೊಂಡು ಹೊರಗೆ ಬರುತ್ತಾನೆ. ಮನೆಯ ಯಜಮಾನನ ಸಮ್ಮತಿಯಿಂದಲೇ ಅದನ್ನು ಒಯ್ಯುತ್ತಿರಬಹುದೆಂದು ಭಾವಿಸಿ ಭಟರು ತಡೆಯುವುದಿಲ್ಲ. ಮರುದಿನ ಬೆಳಗ್ಗೆ ಮನೆಯ ಅಮೂಲ್ಯ ಆಭರಣಗಳು ಕಳುವಾಗಿರುವುದನ್ನು ಶ್ರೀಮಂತ ಗಮನಿಸಿ ಭಟರನ್ನು ಕೇಳುತ್ತಾನೆ. ಕಾವಲು ಭಟರು ರಾತ್ರಿ ನಡೆದ ಘಟನೆಯನ್ನು ಸಾದ್ಯಂತವಾಗಿ ವಿವರಿಸಿ 'ಕಳ್ಳನಾದವನು ತಾನು ಕಳ್ಳನೆಂದು ಎಲ್ಲಿಯಾದರೂ ಸತ್ಯ ಹೇಳುವುದುಂಟೆ ಎಂದು ನಂಬಿ ಮೋಸ ಹೋದೆವು' ಎಂದು ಪರಿತಪಿಸುತ್ತಾರೆ. ಆ ಕಳ್ಳನನ್ನು ಹೇಗಾದರೂ ಮಾಡಿ ಹಿಡಿದು ತರಬೇಕೆಂದು ಶ್ರೀಮಂತ ಆಜ್ಞೆ ಮಾಡುತ್ತಾನೆ. ಕಾವಲುಗಾರರು ಕಷ್ಟಪಟ್ಟು ಹಿಡಿದು ತರುತ್ತಾರೆ. ಶ್ರೀಮಂತನು ಆ ಕಳ್ಳನನ್ನು ರಾಜನ ಮುಂದೆ ಹಾಜರುಪಡಿಸುತ್ತಾನೆ.

ರಾಜ ಕಳ್ಳನ ವಿಚಾರಣೆ ನಡೆಸುತ್ತಾನೆ. ಆಗಲೂ ಕಳ್ಳನದು ಅದೇ ಉತ್ತರ: 'ಹೌದು ನಾನು ಕಳ್ಳ, ಹೊಟ್ಟೆಪಾಡಿಗಾಗಿ ಕಳ್ಳತನ ಮಾಡುತ್ತೇನೆ. ಆದರೆ ಬಡವರ ಮನೆಯಲ್ಲಿ ಕಳ್ಳತನ ಮಾಡುವುದಿಲ್ಲ, ಶ್ರೀಮಂತರ ಮನೆಯಲ್ಲಿ ಮಾತ್ರ ಮಾಡುತ್ತೇನೆ, ಅದೂ ಅವರ ನಿತ್ಯ ಉಪಯೋಗಕ್ಕೆ ಬಾರದ ನಿಷ್ಪ್ರಯೋಜಕ ವಸ್ತುಗಳನ್ನು ಮಾತ್ರ ಕದಿಯುತ್ತೇನೆ'. ರಾಜನಿಗೆ ಕೋಪ ಬಂದು ಮರಣ ದಂಡನೆಯನ್ನು ವಿಧಿಸುತ್ತಾನೆ. ಕಳ್ಳನು ಅಷ್ಟು ಧೈರ್ಯವಾಗಿ 'ನಾನು ಕಳ್ಳ' ಎಂದು ಹೇಳುವಲ್ಲಿ ಏನೋ ಮುಖ್ಯವಾದುದು ಇದೆ, ಕೂಲಂಕಷವಾಗಿ ಪರ್ಯಾಲೋಚನೆ ಮಾಡಿ ತೀರ್ಪು ನೀಡಬೇಕೆಂದು ಮಂತ್ರಿ ಹೇಳಿದರೂ ರಾಜ ಒಪ್ಪದೆ ಅವನ ಶಿರಚ್ಛೇದ ಮಾಡಲು ದಿನವನ್ನು ನಿಗದಿಪಡಿಸಿ ಸೆರೆಮನೆಗೆ ಕಳುಹಿಸುತ್ತಾನೆ. ಶಿಕ್ಷೆ ವಿಧಿಸುವ ಮುನ್ನ ಅವನ ಕೊನೆಯಾಸೆ ಏನೆಂದು ಕೇಳಲಾಗುತ್ತದೆ. ಅದಕ್ಕೆ ಕಳ್ಳ 'ನನಗೆ ಯಾವ ಆಸೆಯೂ ಇಲ್ಲ, ಆದರೆ ನನಗೆ ಒಂದು ರಹಸ್ಯ ವಿದ್ಯೆ ಗೊತ್ತು. ನಾನು ಸತ್ತು ಹೋದರೆ ಅದು ನಷ್ಟವಾಗಿ ಹೋಗುತ್ತದೆ ಎಂಬುದೇ ನನ್ನ ಚಿಂತೆ. ನನ್ನನ್ನು ಮಹಾರಾಜರ ಬಳಿಗೆ ಕರೆದೊಯ್ಯಿರಿ. ಅವರಿಗಲ್ಲದೆ ಬೇರೆ ಯಾರಿಗೂ ನಾನು ಹೇಳುವುದಿಲ್ಲ' ಎನ್ನುತ್ತಾನೆ. ಸರಿ, ರಾಜನ ಮುಂದೆ ಅವನನ್ನು ನಿಲ್ಲಿಸಲಾಗುತ್ತದೆ. 'ರಾಜನ್, ನನಗೆ ಬಂಗಾರವನ್ನು ಬೆಳೆಯುವ

'ಸ್ವರ್ಣಕೃಷಿ' ವಿದ್ಯೆ ಗೊತ್ತಿದೆ. ನನಗೆ ಸ್ವಲ್ಪ ಜಮೀನು ಕೊಟ್ಟರೆ ಸೂರ್ಯನ ಹೊಂಗಿರಣಗಳು ಭೂಮಿಯನ್ನು ಸ್ಪರ್ಶಿಸುವ ಶುಭಗಳಿಗೆಯಲ್ಲಿ ಬಂಗಾರದ ಬೀಜ ಬಿತ್ತಿ ಬೆಳೆದು ತಮ್ಮ ಭಂಡಾರವನ್ನು ತುಂಬಿಸುತ್ತೇನೆ' ಎಂದು ಕಳ್ಳ ಹೇಳುತ್ತಾನೆ. ರಾಜನಿಗೆ ಕಳ್ಳನ ಮೇಲೆ ಸಂಶಯ ಬಂದರೂ ರಾಶಿ ರಾಶಿ ಹೊನ್ನು ದೊರೆತು ತನಗೆ ಲಾಭವಾಗುವುದಾದರೆ ಏಕಾಗಬಾರದೆಂದು ಯೋಚಿಸಿ ಒಪ್ಪಿಕೊಳ್ಳುತ್ತಾನೆ.

ಈ ಕೌತುಕವನ್ನು ನೋಡಲು ರಾಜನಷ್ಟೇ ಅಲ್ಲ, ಮಂತ್ರಿಗಳು, ರಾಜಪುರೋಹಿತರು, ಆಸ್ಥಾನ ಪಂಡಿತರು, ಪುರಜನರು ಅರುಣೋದಯಲ್ಲಿ ಜಾತ್ರೆಯಂತೆ ಕಿಕ್ಕಿರಿದು ಸೇರುತ್ತಾರೆ. 'ತಡ ಯಾಕೆ ಮಾಡುತ್ತೀಯಾ ಬಿತ್ತು!' ಎಂದು ರಾಜ ಆಜ್ಞಾಪಿಸುತ್ತಾನೆ. 'ರಾಜನ್ ನಾನು ಹೇಳಿ ಕೇಳಿ ಕಳ್ಳ. ನಾನು ಬಿತ್ತಿದರೆ ಬೀಜಗಳು ಮೊಳಕೆಯೊಡೆಯುವುದಿಲ್ಲ. ಕಳ್ಳರಲ್ಲದವರು ಮಾತ್ರ ಅವನ್ನು ಬಿತ್ತಬೇಕು. ಆದ್ದರಿಂದ ತಾವೇ ಒಮ್ಮೆ ಮನೆದೇವರನ್ನು ಸ್ಮರಿಸಿ ಬೀಜಗಳನ್ನು ಬಲಗೈಯಿಂದ ಬಿತ್ತೋಣವಾಗಲಿ!' ಎಂದು ಕಳ್ಳ ವಿನೀತನಾಗಿ ಹೇಳುತ್ತಾನೆ. ರಾಜ ತಲೆ ತಗ್ಗಿಸಿ 'ಇಲ್ಲಪ್ಪ, ನಾನು ಬಿತ್ತಲಾರೆ, ಚಿಕ್ಕಂದಿನಲ್ಲಿ ಗೆಳೆಯನ ಕೈಯಲ್ಲಿದ್ದ ಮೋದಕವನ್ನು ಕದ್ದು ತಿಂದಿದ್ದೆ' ಎಂದು ಹೇಳುತ್ತಾನೆ. 'ಹಾಗಾದರೆ ತಮ್ಮ ಮಹಾಮಂತ್ರಿಗಳು ಬಿತ್ತಲಿ' ಎಂದು ಕಳ್ಳ ಹೇಳಿದಾಗ ಮಂತ್ರಿಯೂ ಸಹ ನಿರಾಕರಿಸಿ 'ಇಲ್ಲ, ನಾನೂ ಬಿತ್ತಲಾರೆ, ಚಿಕ್ಕಂದಿನಲ್ಲಿ ಓದುವಾಗ ಗೆಳೆಯನ ಜೇಬಿನಲ್ಲಿದ್ದ ಹಣವನ್ನು ಕದ್ದಿದ್ದೆ' ಎಂದು ತಲೆತಗ್ಗಿಸುತ್ತಾನೆ. ನಂತರ ಅರಮನೆಯ ರಾಜಪುರೋಹಿತರ ಸರದಿ ಬರುತ್ತದೆ. ಅವರೂ ತಲೆತಗ್ಗಿಸುತ್ತಾರೆ. ಅದಕ್ಕೆ ಕಾರಣ ಅವರು ದೇವಸ್ಥಾನದ ಅರ್ಚಕರಾಗಿದ್ದಾಗ ಒಮ್ಮೆ ತುಂಬಾ ಹಸಿವಾಗಿ ದೇವರಿಗೆ ಅರ್ಪಣೆ ಮಾಡಲು ಭಕ್ತರು ತಂದಿದ್ದ ಹಣ್ಣುಗಳನ್ನು ತಿಂದಿದ್ದರಂತೆ! ನಂತರ ಆಸ್ಥಾನಪಂಡಿತರ ಸರದಿ ಬರುತ್ತದೆ. ಅವರೂ ಸಹ 'ಮಹಾರಾಜರೇ, ತಮ್ಮ ಗುಣಗಾನ ಮಾಡಲು ಕಾವ್ಯರಚನೆ ಮಾಡುವಾಗ ಮಹಾಕವಿ ಕಾಳಿದಾಸನ ಪದ್ಯಗಳನ್ನು ಕದ್ದು ಸೇರಿಸಿರುತ್ತೇನೆ. ಕ್ಷಮಿಸಿ' ಎಂದು ತಲೆತಗ್ಗಿಸುತ್ತಾರೆ. ಕೊನೆಯದಾಗಿ ರಾಜ ಕಿಕ್ಕಿರಿದು ನೆರೆದಿದ್ದ ಪ್ರಜೆಗಳತ್ತ ತಿರುಗಿ 'ಎಂದೂ ಏನೂ ಕಳ್ಳತನ ಮಾಡದವರು ಬಂಗಾರದ ಬೀಜ ಬಿತ್ತಲು ಮುಂದೆ ಬನ್ನಿ' ಎಂದಾಗ ಯಾರೂ ಮುಂದಾಗದೆ ತಲೆತಗ್ಗಿಸಿ ನಿಲ್ಲುತ್ತಾರೆ.

ಆಗ ಕಳ್ಳನು 'ಮಹಾರಾಜ! ಈ ರಾಜ್ಯದಲ್ಲಿರುವವರೆಲ್ಲರೂ ಕಳ್ಳರೇ. ಹೀಗಿರುವಾಗ ನನಗೊಬ್ಬನಿಗೇ ಶಿರಚ್ಛೇದನ ಶಿಕ್ಷೆ ಏಕೆ?' ಎಂದು ಕೇಳುತ್ತಾನೆ. ರಾಜ ನಿರುತ್ತರನಾಗಿ ಕಳ್ಳನಿಗೆ ವಿಧಿಸಿದ್ದ ಶಿಕ್ಷೆಯನ್ನು ಹಿಂತೆಗೆದುಕೊಳ್ಳುತ್ತಾನೆ. ಅಷ್ಟೇ ಅಲ್ಲ ಅವನನ್ನು ರಾಜ್ಯದ ಹಣಕಾಸು ಸಚಿವನನ್ನಾಗಿ ಮಾಡಿಕೊಳ್ಳುತ್ತಾನೆ.

ಕಥೆ ಬಹಳ ಸರಳವಾಗಿದೆ. ಹಲವು ಹತ್ತು ಪ್ರಶ್ನೆಗಳನ್ನೂ ಸಹ ಹುಟ್ಟಿ ಹಾಕುತ್ತದೆ. ಇತ್ತೀಚೆಗೆ ರಾಜ್ಯದ ವಿಧಾನ ಸಭೆಗೆ ಚುನಾವಣೆ ನಡೆದಿದೆ. ಇಂದು ಎಲ್ಲ 224 ಶಾಸಕರಿಗೆ ಪ್ರಮಾಣವಚನ ಬೋಧನೆ. 'ಚುನಾವಣೆಯಲ್ಲಿ ಅಕ್ರಮ ಮಾಡದವರು ಮಾತ್ರ ಮುಂದೆ ಬಂದು ಪ್ರಮಾಣ ವಚನ ಸ್ವೀಕರಿಸಿರಿ' ಎಂದು ಷರತ್ತು ಹಾಕಿದರೆ ಆ ಮಹಾರಾಜ, ಮಂತ್ರಿ, ರಾಜಪುರೋಹಿತ, ಆಸ್ಥಾನಪಂಡಿತರಂತೆ ತಲೆತಗ್ಗಿಸಿ ನಿರಾಕರಿಸುವವರು ಯಾರಿದ್ದಾರೆ? ಆತ್ಮಸಾಕ್ಷಿಯಂತೆ ನಡೆದುಕೊಂಡರೆ ಹೊಸ ಸರಕಾರ ಉಳಿಯುವುದೇ? ರಾಜ್ಯದಲ್ಲಿ ಬಂಗಾರದ ಬೆಳೆಯನ್ನು ಬಿತ್ತಿ ಬೆಳೆಯಬಲ್ಲುದೇ?

**30.5.2013**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑